**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂಃ 131/2025**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಧನಲಕ್ಷ್ಮಿ | ದಿನಾಂಕ | ಃ 19.06.2026 |
| ಗಂಡನ ಹೆಸರು | ಃ ತಮ್ಮೇಗೌಡ | ಸಿ ಡಬ್ಲ್ಯೂ | ಃ 1 |
| ವಯಸ್ಸು | ಃ 38 ವರ್ಷ | ಪಿ ಡಬ್ಲ್ಯೂ | ಃ 1 |
| ಉದ್ಯೋಗ | ಃ ವ್ಯವಸಾಯ | | |
| ವಿಳಾಸ | ಃ ತಾತನಹಳ್ಳಿ ಗ್ರಾಮ | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಚಾಸಾ 2 ನನ್ನ ಗಂಡ. ದ್ವಿಚಕ್ರ ವಾಹನದಲ್ಲಿ ಚಾಸಾ 2ರವರಿಗೆ ಅಪಘಾತವಾಗಿರುವ ವಿಚಾರವಾಗಿ ಪೊಲೀಸರಿ ತಿಳಿಸಿರುತ್ತೇನೆ. ಪೊಲೀಸರು ನನ್ನಿಂದ ಒಂದು ದಾಖಲೆಗೆ ಸಹಿಯನ್ನು ಪಡೆದಿರುತ್ತಾರೆ. ಸದರಿ ಸಹಿಯನ್ನು ಸಾಕ್ಷಿದಾರರ ನೋಡಿ ಗುರುತಿದ್ದು ಸದರಿ ದಾಖಲೆಯು ದೂರಾಗಿದ್ದು ಅದನ್ನು ನಿಪಿ.1, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತಕ್ಕೆ ಯಾರು ಕಾರಣ ಎಂದು ಹಾಗೂ ಯಾವ ವಾಹನದಿಂದ ಅಪಘಾತವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಎಪಿಪಿಯವರಿಂದಃ

ದಿಃ 12.12.2024 ರಂದು ನನ್ನ ಗಂಡ ಚಾಸಾ 2ರವರು ರಾಮನಾಥಪುರ ತಂಬಾಕು ಮಾರುಕಟ್ಟೆಗೆ ಹೋಗಿದ್ದು ತಂಬಾಕನ್ನುಮಾರಾಟ ಮಾಡಿ ವಾಪಸು ಊರಿಗೆ ಬರಲು ನಿಂತ್ತಿದಾಗ ಆರೋಪಿಯು ತನ್ನ ವಾಹನ ಸಂಃಕೆಎ-19-ಇಇ-4423 ಬೈಕನಲ್ಲಿ ಚಾಸಾ 2 ರವರನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ತಂಬಾಕು ಮಾರುಕಟ್ಟೆಯಿಂದ ಹೊರಟು ಸುಮಾರು 4.30 ಗಂಟೆ ಸಮಯದಲ್ಲಿ ರಾಮನಾಥಪುರ ಬೆಳವಾಡಿ ರಸ್ತೆಯ ದೊಡ್ಡಹಳ್ಳಿ ಬಸ್ ನಿಲ್ದಾಣದ ಹತ್ತಿರ ಆರೋಪಿಯು

ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ತಿರುವಿನಲ್ಲಿ ಬ್ರೇಕ್ ಹಾಕಿದ್ದರಿಂದ ಆರೋಪಿಯು ಮತ್ತು ಚಾಸಾ 2ರವರು ಬೈಕು ಸಮೇತ ರಸ್ತೆಯ ಮೇಲೆ ಬಿದ್ದು ಒದ್ದಾಡುತ್ತಿದ್ದಾಗ ಚಾಸಾ 5 ಮತ್ತು 6ರವರು ಚಾಸಾ 2ರವರನ್ನು ಎತ್ತಿ ಸುದಾರಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಅಪಘಾತದಿಂದ ಚಾಸಾ 2ರವರ ತಲೆಗೆ, ಬಲತೋಳಿಗೆ ಬಲಕಾಲಿಗೆ ಮತ್ತು ದೇಹದ ಇತರ ಭಾಗಗಳಿಗೆ ಗಾಯಗಳಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದ ವಿಚಾರವನ್ನು ಚಾಸಾ 5ರವರು ನನಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆಂದರೆ ಸರಿಯಲ್ಲ. ಹಾಗೂ ಚಾಸಾ 2ರವರನ್ನು ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಆಸ್ಪತ್ರೆ ಚಿಕಿತ್ಸಾ ವೆಚ್ಚವನ್ನು ಭರಿಸುತ್ತೇನೆಂದು ಹೇಳಿ ರಾಜಿ ಮಾಡಿಕೊಳ್ಳುತ್ತೇನೆಂದರೆ ಸರಿಯಲ್ಲ. ಈ ಅಪಘಾತಕ್ಕೆ ಆರೋಪಿಯು ಬೈಕನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಿಸುತ್ತಿರುವುದರಿಂ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇಲ್ಲ ಃ

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

**ಅಧಿಕ ಜೆಎಂಎಫ್‌ಸಿ, ಅರಕಲಗೂಡು.**